

ಡಾ.ವಿನೋದ ಛೆಬ್ಬಿ

ತಾಯ್ತಂದೆಯರು ಮಕ್ಕಳಿಗೆ ವಿಧೇಯತೆ ಕಲಿಸುತ್ತಾರಲ್ಲ, ಅದರ ಪರಿಣಾಮ ಹೀಗೂ ಆಗಬಹುದು!

# 102: ನಿರ್ಭಾವುಕ ಸಂಗಾತಿ

ಹಸಿ ಕಾಮಭಾವನೆಯು ಮಾನವರ ಹುಟ್ಟುಪ್ರವೃತ್ತಿಯಾದರೂ ಅದು ಸ್ವಚ್ಛಂದವಾಗಿ ಪ್ರಕಟವಾಗಬೇಕಾದರೆ ವ್ಯಕ್ತಿಸ್ವಾತಂತ್ರ್ಯ ಇರಲೇಬೇಕು, ಹಾಗೂ ಕಾಮಾಸಕ್ತಿ ಕಡಿಮೆ ಎಂದು ಹೇಳಿಕೊಳ್ಳುವವರಲ್ಲಿ ಹೆಚ್ಚಿನವರಿಗೆ ವ್ಯಕ್ತಿ ಸ್ವಾತಂತ್ರ್ಯದ ಕೊರತೆಯೂ ಒಂದು ಪ್ರಬಲ ಕಾರಣ ಎಂದು ಹೋದಸಲ ಕಂಡುಹಿಡಿದೆವು. ತನ್ನ ಸಂಗಾತಿಯ ಜೊತೆಗಿನ ಭದ್ರತಾಭಾವಕ್ಕೆ ಮಹತ್ವ ಕೊಡುವಾಗ ತನ್ನ ಬೇಕುಬೇಡಗಳು ಹಿಂದುಳಿಯುತ್ತವೆ ಎಂದೂ ಗೊತ್ತಾಯಿತು. ಇದರ ಆಳಗಲಗಳನ್ನು ನಮಗೆ ಗೊತ್ತಿರುವ ದಂಪತಿಯ ದೃಷ್ಟಾಂತದ ಮೂಲಕ ತಿಳಿಯೋಣ.

ಅಮಲಾ– ಅಂಗದ್ ಜೋಡಿ (ನೋಡಿ ಕಂತು:100) ನೆನಪಿರಬೇಕಲ್ಲವೆ? ಈ ಶಸ್ತ್ರವೈದ್ಯ ದಂಪತಿಗಳಲ್ಲಿ ಅಂಗದ್ ಒಂಟಿಯಾಗಿರಬೇಕಾದರೆ ಸ್ವಚ್ಛಂದವಾಗಿ ಅರಳುತ್ತ ಒಬ್ಬನೇ ಸುಖಪಡುತ್ತಾನೆ. ಆದರೆ ಅಮಲಾಳ ಜೊತೆಯಲ್ಲಿ ಇರಬೇಕಾದರೆ ಅವನ ಸ್ಫೂರ್ತಿಯು ಅವಳಿಗೆ ಸುಖ ಕೊಡುವುದರಲ್ಲಿ ಖರ್ಚಾಗಿ ತನಗೆಂದು ಏನೂ ಉಳಿಯುವುದಿಲ್ಲ. ಅಂಗದನ ಪದಗಳಲ್ಲಿ ಹೇಳಬೇಕಾದರೆ, 'ಸಂಗಾತಿಯ ಬಯಕೆಯನ್ನು ಪೂರೈಸುವಾಗ ಅವಳಿಷ್ಟಕ್ಕೆ ತಕ್ಕಂತೆ ವರ್ತಿಸುತ್ತ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ; ಆಗ ತನ್ನಿಷ್ಟದಂತೆ ವರ್ತಿಸುವುದಕ್ಕೆ ಅವಕಾಶ ಇರುವುದಿಲ್ಲ. ಹಾಗಾಗಿ ತನಗೆ ಬೇಕಾದಂತೆ ಸ್ವಚ್ಛಂದವಾಗಿ ಇರಲು ಆಗುವುದಿಲ್ಲ.' ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ, ಕಾಮಕೂಟದಲ್ಲಿ ಉಂಟಾಗುವ ಸುಖವನ್ನು 'ನಮ್ಮದು' ಎನ್ನದೆ, 'ನನ್ನದು' ಹಾಗೂ 'ನಿನ್ನದು' ಎಂದು ವಿಭಾಗೀಕರಿಸುತ್ತಿದ್ದಾನೆ. ಈ ನನ್ನದು ಬೇರೆ, ನಿನ್ನದು ಬೇರೆ ಎನ್ನುವ ವಿಭಾಗೀಕರಣದ ಮನೋಭಾವವನ್ನು ಸ್ವಲ್ಪ ಗಮನಿಸೋಣ.

ಅಂಗದ್ ಮನೆಗೆಲಸ, ಮಕ್ಕಳ ಲಾಲನೆ ಪಾಲನೆ, ಇತ್ಯಾದಿ ಎಲ್ಲದರಲ್ಲೂ ಸಮಭಾಗ ತೆಗೆದುಕೊಳ್ಳುತ್ತಾನೆ; ಅಷ್ಟೇ ಅಲ್ಲ, ಹೆಂಡತಿ ಮಾಡುವ ಶಸ್ತ್ರಚಿಕಿತ್ಸೆಗಳಲ್ಲೂ ಸಹಾಯಕನಾಗಿ ವರ್ತಿಸುತ್ತಾನೆ. ಇದರಲ್ಲಿ ಒಂದು ಕುತೂಹಲಕರ ಅಂಶವಿದೆ. ಇದು ನಾನು ಅಂಗದನೊಂದಿಗೆ ಮಾತಾಡುವಾಗ ಗೊತ್ತಾಯಿತು.

'ಅಂಗದ್, ಮನೆಗೆಲಸ, ಮಕ್ಕಳನ್ನು ಸ್ಕೂಲಿಗೆ ತಯಾರು ಮಾಡುವುದು ಇವೆಲ್ಲದರಲ್ಲೂ ಹೆಂಡತಿಗೆ ಸಹಾಯ ಮಾಡುತ್ತೀರಿ, ಸರಿಯಾ? (ತಲೆ ಅಲ್ಲಾಡಿಸಿದ) ಅಷ್ಟಲ್ಲದೆ ಆಕೆಗೆ ಆಪರೇಶನ್‌ಗಳಲ್ಲೂ ಸಹಾಯಕನಾಗಿ ಸಹಾಯ ಮಾಡುತ್ತೀರಿ. ಸರಿಯಾ? (ಮತ್ತೆ ತಲೆ ಅಲ್ಲಾಡಿಸಿದ) ಮನೆಗೆಲಸದಲ್ಲಿ ಸಹಾಯ ಮಾಡುವುದು, ಹಾಗೂ ಆಪರೇಶನ್‌ಗಳಲ್ಲಿ ಸಹಾಯ ಮಾಡುವುದು – ಇವೆರಡರಲ್ಲಿ ವ್ಯತ್ಯಾಸ ಕಾಣುತ್ತದೆಯೆ?'

ಉತ್ತರ ಕೊಡಲು ಸ್ವಲ್ಪ ಸಮಯ ತೆಗೆದುಕೊಂಡ. 'ಇಲ್ಲ, ನನಗೇನೂ ವ್ಯತ್ಯಾಸ ಕಾಣುತ್ತಿಲ್ಲ.'

ತನ್ನ ಆಪರೇಶನ್‌ಗಳಿಗೆ ಅಮಲಾ ಸಹಾಯಕ್ಕೆ ಬರುತ್ತಾರೆಯೆ ಎಂದು ಕೇಳಿದ್ದಕ್ಕೆ ಇಲ್ಲವೆಂದ. ಯಾಕೆಂದು ಕಾರಣಕೊಟ್ಟ. ಅವನ ಶಸ್ತ್ರಚಿಕಿತ್ಸೆಗಳು ಚಿಕ್ಕದಾಗಿರುತ್ತವೆ, ಹಾಗಾಗಿ ಅದಕ್ಕೆ ನರ್ಸ್ ಒಬ್ಬಳೇ ಸಾಕು ಎಂದ. ಯಾವೊತ್ತಾದರೂ ನರ್ಸ್ ರಜೆ ಹಾಕಿದಾಗ? ಆಗ ತನ್ನ ಸ್ನೇಹಿತನನ್ನು ಬರಮಾಡಿಕೊಂಡಿದ್ದಾನೆಯೇ ಹೊರತು ಅಮಲಾಳ ಸಹಾಯ ತೆಗೆದುಕೊಂಡಿರಲಿಲ್ಲ. ತನ್ನದೇ ನರ್ಸಿಂಗ್ ಹೋಮ್‌ನಲ್ಲಿ ಇರುವ ಸರ್ಜನ್ ಹೆಂಡತಿಯನ್ನು ಬಿಟ್ಟಿದ್ದಾನೆ. ಅಷ್ಟೇ ಅಲ್ಲ, ತನ್ನದೇ ಕೆಲಸಗಳಾದ ಕಾರ್ ಸ್ವಚ್ಛಗೊಳಿಸುವುದು, ಇಂಟರ್‌ನೆಟ್ ನಲ್ಲಿ ಪುಸ್ತಕ ಆರ್ಡರ್ ಮಾಡುವುದು, ಸಮ್ಮೇಳನಕ್ಕೆ ತನ್ನ ಪ್ರಸ್ತುತಿ ಬರೆಯುವುದು, ವಿದೇಶ ಪ್ರಯಾಣದ ಯೋಜನೆ ಮಾಡುವುದು, ಪ್ರಯಾಣಕ್ಕೆ ತನ್ನ ಸೂಟ್‌ಕೇಸ್ ಸಿದ್ಧಮಾಡುವುದು ಇತ್ಯಾದಿ ಕಾರ್ಯಕೆಲಸಗಳನ್ನು ಒಬ್ಬನೇ ಮಾಡುತ್ತಾನೆಯೇ ಹೊರರು ಯಾವೊತ್ತೂ ಅಮಲಾಳ ಸಹಾಯ– ಸಹಕಾರ ಪಡೆದಿದ್ದು ಇಲ್ಲ.

ಅಂದರೆ, ಅಂಗದ್ ಸಂಗಾತಿಯ ಕೆಲಸಕ್ಕೆ ಸಹಾಯ ಮಾಡುತ್ತಾನೆ. ಆದರೆ ತನ್ನ ಕೆಲಸಗಳನ್ನು ಪ್ರತ್ಯೇಕವಾಗಿ ತಾನೊಬ್ಬನೇ ಮಾಡಿಕೊಳ್ಳುತ್ತಾನೆ. ಅವನ ಇದೇ ವಿಭಾಗೀಕರಣದ ಪ್ರವೃತ್ತಿ ಲೈಂಗಿಕ ಅಭಿವ್ಯಕ್ತಿಯಲ್ಲೂ ಕಾಣುತ್ತದೆ: ಸಂಗಾತಿಯು ಸುಖ ಪಡೆಯಲು ಸಹಾಯ ಮಾಡುತ್ತಾನೆ. ಆದರೆ ತನ್ನ ಸುಖವನ್ನು ಒಬ್ಬನೇ ಪಡೆಯುತ್ತಾನೆ!

ಒಬ್ಬರು ಕಾಮಕೂಟದಲ್ಲಿ ಹೇಗೆ ವರ್ತಿಸುತ್ತಾರೆ – ಅಥವಾ ಹೇಗೆ ವರ್ತಿಸುವುದಿಲ್ಲ – ಎನ್ನುವುದನ್ನು ಅವರ ನಿತ್ಯ ಜೀವನದ ರೀತಿನಡತೆಗಳಿಂದ ತಿಳಿದುಕೊಳ್ಳಬಹುದು!

ಅದು ಸರಿ, ಸುಖವನ್ನು ವಿಭಾಗೀಕರಿಸುವ ವರ್ತನೆಯನ್ನು ಅಂಗದ್ ಎಲ್ಲಿಂದ ಕಲಿತ? ಇದನ್ನು ತಿಳಿದುಕೊಳ್ಳಲು ಅವನ ಬಾಲ್ಯಕ್ಕೆ ಹೋಗೋಣ.

ಅಂಗದನ ತಾಯ್ತಂದೆಯರಿಗೆ ಇವನೊಬ್ಬನೇ ಗಂಡುಮಗ. (ಇವನು ಹುಟ್ಟಿದ ಏಳು ವರ್ಷದ ನಂತರ ತಂಗಿಯೊಬ್ಬಳು ಹುಟ್ಟಿದ್ದಾಳೆ.) ಅಂಗದನ ತಾಯಿಗೆ ಇವನು ಹುಟ್ಟುವ ಮುಂಚೆ ಒಂದು ಸಲ ಹೊಟ್ಟೆಯಲ್ಲಿ ಮಗು ತೀರಿಕೊಂಡಿದ್ದು, ಇನ್ನೊಂದು ಸಲ ಮಗು ಹುಟ್ಟಿ ಮೂರು ದಿನಗಳ ಬಳಿಕ ಕಣ್ಣುಮುಚ್ಚಿತ್ತು. ಹಾಗಾಗಿ ಅಂಗದ ಹೆತ್ತವರ ಕಣ್ಮಣಿಯಾಗಿ ಬೆಳೆದ. ಅವನು ಎರಡು ವರ್ಷದ ಮಗುವಿರುವಾಗ ಅಜ್ಜ ಅಂಗದನನ್ನು ಹೊರಗೆ ತಿರುಗಾಡಿಕೊಂಡು ಹೋದವನು ಬಹಳ ಹೊತ್ತಾದರೂ ತಿರುಗಿ ಬಂದಿರಲಿಲ್ಲ. ಅಂಗದ ತಾಯಿ ಹುಡುಕಿಕೊಂಡು ಹೋಗಿದ್ದಾಳೆ. ಮನೆಯ ಹತ್ತಿರದ ಉದ್ಯಾನದಲ್ಲಿ ಆಕೆಯ ಮಾವ ಎಚ್ಚರವಿಲ್ಲದೆ ಬಿದ್ದುಕೊಂಡಿದ್ದನ್ನೂ, ಮಗು ಅಂಗದ್ ಅವನ ಬದಿಯಲ್ಲಿ ಅನಾಥನಾಗಿ ಕುಳಿತು ಕಿರುಚಿ ಅಳುತ್ತಿದ್ದುದನ್ನೂ ಕಂಡಿದ್ದಾಳೆ. (ಮಾವ ಹೃದಯಾಘಾತದಿಂದ ತೀರಿಕೊಂಡಿದ್ದು ಆಮೇಲೆ ಗೊತ್ತಾಗಿದೆ.) ಆ ದೃಶ್ಯವು ತಾಯಿಗೆ ಆಘಾತ ಉಂಟುಮಾಡಿದೆ. ಮಾವ ಇಲ್ಲದಿರುವಾಗ ಮಗುವಿಗೆ ಏನಾದರೂ ಆಗಿದ್ದರೆ, ಯಾರಾದರೂ ಅವನನ್ನು ಕದ್ದುಕೊಂಡು ಹೋಗಿದ್ದರೆ ಎನ್ನುವ ವಿಚಾರ ಬಂದು ಭೀಕರ ಅನುಭವ ಉಂಟುಮಾಡಿದೆ. ಈ ಆಘಾತದಿಂದ ಹಲವು ವರ್ಷಗಳಾದರೂ ಹೊರಬರಲಿಕ್ಕಾಗಿಲ್ಲ. ಇದಕ್ಕೆ ಆಘಾತದ ನಂತರದ ಪ್ರತಿಕ್ರಿಯೆ ಎಂದು ಕರೆಯೋಣ. ಇದಾದ ನಂತರ ಆಕೆ ಮಗುವನ್ನು ಹೊರಗೆ ಬಿಟ್ಟೇ ಇಲ್ಲ. ಅವನು ಹೊರಗೆ ಕಾಲಿಟ್ಟರೆ ಸಾಕು, ಅವಳಿಗೆ ಎದೆಬಡಿತ ಶುರುವಾಗಿ ಗಾಬರಿಯಾಗುತ್ತಿದ್ದಳು. ಆಗ ಮಗು ಅಂಗದನೂ ಗಾಬರಿಯಾಗುತ್ತಿದ್ದ. ತಾನು ಹೊರಗೆ ಕಾಲಿಟ್ಟರೆ ಅಮ್ಮ ಭಯಪಡುತ್ತಾಳೆಂದು ಅವನಿಗೆ ಬಹುಬೇಗ ಗೊತ್ತಾಯಿತು. ಹಾಗಾಗಿ ಅಮ್ಮನನ್ನು ಆತಂಕದಿಂದ ಪಾರುಮಾಡಲು ಮಗು ಅಂಗದ್ ತನ್ನ ಸುಖವನ್ನು ಬಿಟ್ಟುಕೊಡುವ ಭಾವನಾ ನಿರ್ಧಾರ ಮಾಡಿದ. ಹೊರಗೆ ಆಟ ಆಡುವುದರ ಬದಲು ಮನೆಯಲ್ಲೇ ಚದುರಂಗ, ಚೈನೀಸ್ ಚೆಕರ್ ಇತ್ಯಾದಿ ಆಡುವುದನ್ನು ಕಲಿತ. ದೊಡ್ಡವನಾದಮೇಲೆ ಸಮಯ ಸಿಕ್ಕಾಗ ಇಸ್ಪೀಟು ಎಲೆಗಳನ್ನು ಜೋಡಿಸುತ್ತ ಒಬ್ಬನೇ ಗಂಟೆಗಟ್ಟಲೆ ಕಳೆಯುತ್ತಾನೆ. ಸುಡೋಕು ಅವನಿಗೆ ಇಷ್ಟವಾದ ಆಟ. ತನ್ನ ಹತ್ತಿರದವರು, ಅವಲಂಬಿತರು ತೊಂದರೆಯಲ್ಲಿದ್ದು ಆತಂಕ ತೋರಿಸುತ್ತಿದ್ದರೆ ಅವನು ಸಹಾಯ ಮಾಡುತ್ತಾನೆ. ಆದರೆ ಅದರಲ್ಲಿ ಒಳಗೊಳ್ಳುವಿಕೆ ಇಲ್ಲದೆ ನಿರ್ಭಾವುಕತೆ ಇರುತ್ತದೆ. ಇದೇ ಗುಣವು ತನ್ನ ಸಂಗಾತಿಯೊಡನೆ ಕಾಡುತ್ತಿದೆ. ಮನೆಗೆಲಸಗಳಲ್ಲೂ, ಶಸ್ತ್ರಚಿಕಿತ್ಸೆಯಲ್ಲೂ ಮಾಡುವ ಸಹಾಯವನ್ನು ಕಾಮಕೂಟದಲ್ಲೂ ಮಾಡುತ್ತಾನೆಯೇ ಹೊರತು ಒಳಗೊಳ್ಳುವುದಿಲ್ಲ!

ಅಂಗದನ ಈ ಸಮಸ್ಯೆಯನ್ನು ಬಗೆಹರಿಸಲು ಹೇಗೆ ಸಹಾಯ ಮಾಡಿದೆ ಎಂದು ಮುಂದಿನ ಸಲ ವಿವರಿಸುತ್ತೇನೆ.

ಉಚಿತ ಸಹಾಯವಾಣಿಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ.
**ಲೈಂಗಿಕ ಸಮಸ್ಯೆಗಳಿಗೆ: 8050255229 (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: 8494944888 (ಬೆಳಿಗ್ಗೆ 11ರಿಂದ ಸಂಜೆ 5ರ ತನಕ) ಲೇಖಕರ ವಿಳಾಸ: www.medisex.org**